LOANS TO WEAKER SECTIONS BY URBAN CO-OPERATIVE BANKS

241 SRI P. M. BANGI (Jamkhandi).—

Wili the Minister for Co-operation be pleased to state.

(*a*) whether the Urban Co-operative Banks in the State are not sanctioning the loans to the weaker sections of the community who have neither immovable property nor movable property of their own.

(*b*) whether the Government intends to issue orders to the Urban Co-operative Banks in the State to advance loans to the weaker sections of the community and also to the small artisans and small scale industrialists by taking personal bond and sure ties and also by providing subsidy by way of outright grants to induce the Urban Co-operative Banks to advance loans to such class of persons ?

SRI A SHANKARA ALVA.—(Minister for Co-operation)

(*a*) No.

(*b*) No.

ಶ್ರೀ ಪಿ. ಎಂ. ಬಂಗಿ.—ಮೈಸೂರು ರಾಜ್ಯದಲ್ಲಿ ಸುಮಾರು ೨೦೦ ಅರ್ಬನ್ ಕೋಆಪರೇಟೀವ್ ಬ್ಯಾಂಕ್‌ಗಳಿದ್ದು, ಯಾವ ಯಾವ ಬ್ಯಾಂಕ್‌ಗಳಿಂದ ಕಳೆದ ೫ ವರ್ಷಗಳಲ್ಲಿ ಚರ ಆಸ್ತಿ ಇಲ್ಲದವರಿಗೆ ಸಾಲ ಕೊಟ್ಟಿದ್ದಾರೆ ?

ಶ್ರೀ ಎ. ಶಂಕರ ಆಳ್ವ.—ನಿಖರ ಅರ್ಬನ್ ಕೋಆಪರೇಟೀವ್ ಬ್ಯಾಂಕ್‌ಗಳು ಇದ್ದಹಾಗೆ ಕಾಣುತ್ತದೆ ಅವರ ಬೈಲಾ ಪ್ರಕಾರ ಹೆಚ್ಚಿಗೆ ಬ್ಯಾಂಕ್‌ಗಳಲ್ಲಿ ಜಮೀನು ತೆಗೆದುಕೊಳ್ಳದೇ ಸಾಲ ಕೊಡುವುದಿಲ್ಲ ಪ್ರತ್ಯೇಕವಾಗಿ ಅಂಥ ಬ್ಯಾಂಕ್‌ಗಳಿದ್ದರೆ, ನಮ್ಮ ತಿಳುವಳಿಕೆಗೆ ಬಂದಿಲ್ಲ. ಕೆಲವು ಇದ್ದರೆ ಕೊಡಲಿಕ್ಕೆ ಸಾಕು.

ಶ್ರೀ ಪಿ. ಎಂ. ಬಂಗಿ.—ಅರ್ಬನ್ ಬ್ಯಾಂಕ್ ಯಾರಿಗೂ ಜಮೀನು ಮತ್ತು ಸ್ಥಿರ ಆಸ್ತಿ ಕೊಲ್ಲಾಟರಲ್ ಸೆಕ್ಯೂರಿಟಿ ತೆಗೆದುಕೊಳ್ಳದೆ ಸಾಲ ಕೊಡಬಾರದು ಎಂದು ರಿಸರ್ವ್‌ಬ್ಯಾಂಕ್ ಇನ್‌ಸ್ಪೆಕ್ಷನ್ ರಿಪೋರ್ಟ್ ಮತ್ತು ಗವರ್ನ್‌ಮೆಂಟ್ ಆಡಿಟರ್ ರಿಪೋರ್ಟಿನಲ್ಲಿ ಇನ್‌ಸ್ಪೆಕ್ಷನ್ ಇದ್ದು ಈ ಪ್ರಕಾರವಾಗಿ ಎಲ್ಲಾ ಬ್ಯಾಂಕ್‌ಗಳಿಗೂ ಆಡಿಟ್ ರಿಪೋರ್ಟ್ ಇನ್‌ಸ್ಪೆಕ್ಷನ್ ನೋಟ್ಸ್ ಬಂದಿದೆಯೇ. ಇಂಥಾ ಕಡೆ ಮಾನ್ಯ ಮಂತ್ರಿಗಳ ಗಮನ ಹೋಗಿದೆಯೇ ?

ಶ್ರೀ ಎ. ಶಂಕರ ಆಳ್ವ.—ನನ್ನ ತಿಳುವಳಿಕೆಗೆ ಬಂದಿದ್ದು ಇಲ್ಲ. ನಾನು ವಿಚಾರಿಸುತ್ತೇನೆ

ಶ್ರೀ ಪಿ. ಎಂ. ಬಂಗಿ.—ಅಂಥ ಇನ್‌ಸ್ಪೆಕ್ಷನ್ ನೋಟ್ಸ್ ಮತ್ತು ನಿರ್ಬಂಧಗಳು ಇದ್ದರೆ ಅದನ್ನು ಸಡಿಲಿಸಿ ಬಡ ಜನರಿಗೆ ಸಾಲ ಸಿಗುವಂತೆ ಏರ್ಪಾಡು ಮಾಡುತ್ತೀರಾ ಹೇಗೆ ?

ಶ್ರೀ ಎ ಶಂಕರ ಆಳ್ವ —ಬ್ಯಾಂಕ್‌ನವರು, ಅವರ ಬೈಲಾಸ್‌ನಲ್ಲಿ ಹೇಗೆ ಸಾಲ ಕೊಡಬೇಕು ಎಂದು ನಿರ್ಣಯಿಸಬೇಕಾಗುತ್ತದೆ. ಹೆಚ್ಚಾಗಿ ರಿಸರ್ವ್, ಡಿಪಾಸಿಟರ್ಸ್ ಹಣದ ಮೇಲೆ ಹೋಗುತ್ತದೆ. ಆದರೂ ಜಮೀನು ತೆಗೆದುಕೊಂಡೇ ಸಾಲ ಕೊಡಬೇಕಾಗುತ್ತದೆ.

ಶ್ರೀ ಟಿ. ಎಂ. ಮಂಜುನಾಥ.—ಸಮಾಜದಲ್ಲಿ ದುರ್ಬಲವರ್ಗದವರು, ಸಣ್ಣ ಕಂಶಲಕರ್ಮಿಗಳು ಇದ್ದಾರೆ. ಇವರುಗಳಿಗೆ ಸಹಕಾರ ಸಂಘಗಳಿಂದ ಸಾಲ ಕೊಡಿಸುತ್ತೀರಾ ಎಂದು ಕೇಳಿದ ಕ್ಕೆ ಇಲ್ಲ ಹೇಳಿದ್ದೀರಿ. ಇವತ್ತಿನದಿವಸ ಸಮಾಜದಲ್ಲಿರತಕ್ಕ ದುರ್ಬಲ ವರ್ಗದವರಿಗೆ ಹಣ ಯಾವ ಸಂಸ್ಥೆಯ ಮೂಲಕ ಕೊಡತಕ್ಕ ಏರ್ಪಾಡು ಮಾಡಿದ್ದೀರಿ ? ಸಹಕಾರ ಸಂಘಗಳಲ್ಲಿ ಯಾರೂ ಕೊಡುವುದಿಲ್ಲ ಕುಲುಮೆ

ಕೆಲಸ ಮಾಡುವವರಿಗೆ, ಮೋಚಿ ಕೆಲಸ ಮಾಡುವವರಿಗೆ ಸಾಲ ಕೊಡುವುದಿಲ್ಲ. ಅಂಥವರಿಗೆ ಏನು ವಿವ್ಯಾಡು ಮಾಡಿದ್ದೀರಿ ?

ಶ್ರೀ ಎ. ಶಂಕರ ಅಳ್ವ.—ಅವರಿಗೆ ಅರ್ಬನ್ ಬ್ಯಾಂಕ್‌ಗಳಿಂದ ಸಾಲ ಕೊಡಬೇಕು ಎನ್ನುವ ಪ್ರಶ್ನೆ. ಅವರು ಹಾಗೆ ಕೊಡುವುದಿಲ್ಲ. ಬೈಲಾಸ್‌ನಲ್ಲಿ ಇದ್ದರೆ ಆ ಬಗ್ಗೆ ಸೂಚನೆ ಕೊಡಬಹುದು. ಗವರ್ನ್‌ಮೆಂಟ್ ನಿಂದ ಹೆಚ್ಚು ಷೇರ್‌ಕ್ಯಾಪಿಟಲ್ ಪಡೆದುಕೊಂಡಿರುವುದಿಲ್ಲ. Only 33 Banks have taken share capital form the Government ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಸಮಾಜದ ದುರ್ಬಲವರ್ಗದವರಿಗೆ ಸಹಕಾರ ಬ್ಯಾಂಕುಗಳು ಯಾವ ವಿಧವಾದ ಸಾಲ ಕೊಡುವುದಿಲ್ಲ, ಬೈಲಾಡಲ್ಲಿ ಅವಕಾಶ ಇಲ್ಲ ಎಂದು ಹೇಳಿದರಿ. ನ್ಯಾಷನಲೈಸ್ಡ್ ಬ್ಯಾಂಕ್‌ನಲ್ಲಿ ಪರ್ಸನಲ್ ಸ್ಯೂರಿಟಿ ಮೇಲೆ ಬಡವರಿಗೆ ಮತ್ತು ದುರ್ಬಲ ವರ್ಗದವರಿಗೆ ಸಾಲ ಕೊಡತಕ್ಕಂಥ ನೀತಿ ಇದೆ ಈರೀತಿ ಸಹಕಾರಿ ಬ್ಯಾಂಕ್‌ಗಳಲ್ಲಿ ಸಹ ಇರತಕ್ಕ ಬೈಲಾಗಳನ್ನು ತಿದ್ದುಪಡಿಮಾಡಿ ಸಾಲ ವ್ಯವಸ್ಥೆಯನ್ನು ಪರ್ಸನಲ್ ಶೂರಿಟಿ ಮೇಲೆ ಕೊಡುವುದಕ್ಕೆ ವಿವ್ಯಾಡು ಮಾಡುತ್ತೀರಾ ?

ಶ್ರೀ ಎ. ಶಂಕರ ಅಳ್ವ.—ಅರ್ಬನ್ ಬ್ಯಾಂಕ್‌ನಲ್ಲಿ ಹೀಗೇ ಮಾಡಬೇಕು ಎಂದು ಹೇಳಲಿಕ್ಕೆ ನಮಗೆ ಅಧಿಕಾರ ಇಲ್ಲ.

ಶ್ರೀ ಎಚ್. ಎಸ್ ಸಿದ್ದಪ್ಪ.—ಈ ಬಗ್ಗೆ ದುರ್ಬಲರಿಗೆ ಪರ್ಸನಲ್ ಬಾಂಡ್ ಮೇಲೆ ಕೊಡತಕ್ಕ ಚಿಕ್ಕಪುಟ್ಟ ತಿಳುವಳಿಕೆ ಬಂದಾಗ ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದೀರಿ, ತಿಳುವಳಿಕೆ ಬರುವುದು ಇಷ್ಟು ವರ್ಷಕ್ಕೆ, ಪರಿಶೀಲನೆ ಮಾಡಿ ಸಾಲ ಸಿಗುವುದು ಎಷ್ಟು ವರ್ಷಕ್ಕೆ ? ಸಹಕಾರಿ ಬ್ಯಾಂಕ್ ನಿಂದ ತಿಳುವಳಿಕೆ ತೆಗೆದುಕೊಂಡು ದುರ್ಬಲವರ್ಗದವರಿಗೆ ಸಹಾಯ ಮಾಡುತ್ತೀರಾ ?

ಶ್ರೀ ಎ. ಶಂಕರ ಅಳ್ವ.—ಪ್ರತ್ಯೇಕ ಸವಾಲು ಕೇಳಿದಿರಿ, ಜವಾಬು ಹೇಳಬಹುದು. ಅರ್ಬನ್ ಬ್ಯಾಂಕ್ಸ್ ಸಾಲ ಕೊಡುತ್ತಾರೆ ಎಂದು ಕೇಳಿದಿರಿ, ಅರ್ಬನ್ ಬ್ಯಾಂಕ್ ಸಾಲ ಕೊಡುವುದಿಲ್ಲ.

ಶ್ರೀ ಪಿ. ಎಂ ಬಂಗಿ.—ಅರ್ಬನ್ ಬಾಂಕ್ಸ್ ಸಾಲ ಕೊಡಲಿಕ್ಕೆ ಏಕೆ ಹಿಂದು ಮುಂದು ನೋಡುತ್ತಾರೆ ಎಂದರೆ ರಿಕವರಿ ಕಷ್ಟ ಆಗುತ್ತದೆ ಎನ್ನುವ ದೃಷ್ಟಿಯಿಂದ ಸರ್ಕಾರದವರು ಅವರಿಗೆ ಬ್ಯಾಡ್ ಡಟ್ ನಾವು ತುಬಿ ಕೊಡುತ್ತೇವೆಂದು ಅಂಡರ್ ಟೇಕಿಂಗ್ ಕೊಟ್ಟರೆ ಎಲ್ಲಾ ಅರ್ಬನ್ ಬ್ಯಾಂಕ್‌ಗಳವರು ಇಂತಹ ಜನಗಳಿಗೆ ಸಹಾಯ ಮಾಡಲು ಸಿದರಿದ್ದಾರೆ. ಆದುದರಿಂದ ಸರ್ಕಾರದವರು ಈ ಪ್ರಕಾರನ ಅಂಡರ್‌ಟೇಕಿಂಗ್ ಕೊಡಲಿಕ್ಕೆ ಸಿದ್ಧರಿದ್ದಾರಿಯೇ ಹೇಗೆ ?

ಶ್ರೀ ಎ. ಶಂಕರ್ ಅಳ್ವ.—ಇದನ್ನು ಪರಿಶೀಲಿಸಬೇಕು.

WOMEN INDUSTRIAL CO-OPERATIVE SOCIETY, ULSOOR

257 SRI J. P. SARWESH (Sedam).—Will the Minister for Co-operation be pleased to state.—

(*a*) whether thereis a Women Industrial Co-operative Society at Ulsoor, Bangalore-8.

(*b*) if so, the total number of women working in the said Society.

(*c*) whether I-T.I. is supplying cables and coils for winding to the said Society-

(*d*) the daily or monthly wages that is being paid to every individual labourer in the said Society ?